ಅಥವಾ ಶಾಲೆಯಲ್ಲಿ ವಿಶೇಷ ಕಾರ್ಯಕ್ರಮಗಳೋ ಇದ್ದು ಸಂಜೆ ಇವರು ತುಸು ತಡವಾಗಿ ಮನೆಗೆ ಬರುವಾಗ ಕತ್ತಲು ಕವಿಯುತ್ತಿದ್ದರೆ ಅಂತಹ ಕತ್ತಲಿನಲ್ಲಿ ಎಷ್ಟೊಂದು ಸಲ ದಟ್ಟ ಮರಗಳ ಹಾಡಿಯ ಮೂಲಕ ಹಾದು ಬರುವಾಗ ಆಕೆಯೇ ಉತ್ಸಾಹ ತೋರುತ್ತಿದ್ದುದಿತ್ತು. 'ನೀ ಹೆದರಿಕೋ ಬೇಡ... ಏನೂ ಆಗುವುದಿಲ್ಲ ಕಣೋ' ಎನ್ನುತ್ತ ಆಕೆಯೇ ಮುಂದಾಗುತ್ತಿದ್ದರೂ ಹೆದರಿಕೆ ಇವನನ್ನು ತಡೆಯುತ್ತಿತ್ತು. ಆಗೆಲ್ಲ ವಿವೇಕದ ಸೋಗು ಹಾಕಿ ಆಕೆಯನ್ನು ಎಚ್ಚರಿಸುತ್ತಿದ್ದ. ತುಸು ಕೀಳರಿಮೆಯೂ ಇದ್ದಿರಬಹುದೇನೋ...

ಹೈಸ್ಕೂಲಿನ ಕೊನೆಯ ವರ್ಷ. ಮುಂದಿನ ಬದುಕಿನ ಬಗ್ಗೆ ಕನಸು ಕಟ್ಟಿಕೊಳ್ಳುತ್ತ ಉತ್ತಮ ಮಟ್ಟದಲ್ಲಿ ಹೈಸ್ಕೂಲನ್ನು ಮುಗಿಸಬೇಕೆಂಬ ಛಲದಿಂದ ಓದುತ್ತಿದ್ದ ಕಾಲದಲ್ಲಿ ಇವನಿದ್ದ ಮನೆಯವರಿಗೆ ಎಂತಹುದೋ ಕಷ್ಟ ಬಂದಿತ್ತು. ಊರೇ ಬಿಡುವಂತಹ ಪರಿಸ್ಥಿತಿ. ಏನೋ ಕಷ್ಟದಲ್ಲಿದ್ದಾನೆಂದು ಇವನನ್ನು ಮನೆಯಲ್ಲಿಟ್ಟುಕೊಂಡಿದ್ದ ಅವರೇ ಕಷ್ಟದಲ್ಲಿ ಬಿದ್ದಾಗ ಇವನ ಬಗ್ಗೆ ಕಾಳಜಿ ಮಾಡಿಯಾರೇ. ಒಂದು ದಿನ ಕರೆದು, 'ನೋಡಪ್ಪಾ ಊರು ಬಿಡುತ್ತಿದ್ದೇವೆ... ಇಷ್ಟು ದಿನ ಕಷ್ಟವೋ ಸುಖವೋ ನಿನ್ನನ್ನು ನೋಡಿಕೊಂಡಿದ್ದೇವೆ. ಇನ್ನು ಮೇಲೆ ನಿನ್ನ ದಾರಿ ನಿನಗೆ...' ಎಂದು ಹೇಳಿದವರು ಮಾರನೆ ದಿನವೇ ಮನೆ ಖಾಲಿ ಮಾಡಿಕೊಂಡು ಹೋಗಿದ್ದರು. ಎಲ್ಲಿಗೆ ಹೋಗುತ್ತೇವೆಂದೂ ಹೇಳಲಿಲ್ಲ. ಇವನು ಬೀದಿಗೆ ಬಿದ್ದಿದ್ದ.

ವರ್ಷಾಂತ್ಯದ ಪರೀಕ್ಷೆಗೆ ಇನ್ನೂ ಮೂರು ತಿಂಗಳು ಉಳಿದಿದ್ದವು. ಪರೀಕ್ಷೆ ಮುಗಿಸಬೇಕೆಂಬ ಹಟವಿತ್ತು. ನಿಲ್ಲಲು ನೆಲೆಯಿಲ್ಲ. ತಿನ್ನಲು ಅನ್ನವಿಲ್ಲ. ಯಾರು ಯಾರನ್ನೋ ಬೇಡಿದ್ದ. ಎಲ್ಲೆಲ್ಲೋ ಉಳಿದಿದ್ದ. ಓದಿನ ನಡುವೆಯೂ ಬಿಡುವು ಮಾಡಿಕೊಂಡು ಎಲ್ಲೆಲ್ಲೋ ಕೆಲಸ ಮಾಡುತ್ತ ಮೂರು ಹೊತ್ತು ಊಟ ಮಾಡುವಲ್ಲಿ ಒಂದೇ ಹೊತ್ತಿನ ಊಟ ಮಾಡುತ್ತ ಸಮಯವನ್ನು ಕಳೆದಿದ್ದ.

ತನ್ನ ಈ ಹೀನಸ್ಥಿತಿ ಗೆಳತಿಗೆ ತಿಳಿಯಬಾರದೆಂದು ಕದ್ದು ಮುಚ್ಚಿ ತಿರುಗುತ್ತಿದ್ದ ಇವನನ್ನು ಅವಳೇ ಹುಡುಕಿಕೊಂಡು ಬರುತ್ತಿದ್ದಳು. ತನ್ನಿಂದ ಆಗುವ ಸಹಾಯ ಮಾಡುತ್ತೇನೆನ್ನುತ್ತಿದ್ದಳು. ಖರ್ಚಿಗೆಂದು ತನ್ನಪ್ಪ ಕೊಡುತ್ತಿದ್ದ ಹಣವನ್ನು ತಾನು ಒಂದಿಷ್ಟೂ ಖರ್ಚುಮಾಡದೆ ಇವ ಬೇಡ ಬೇಡವೆನ್ನುತ್ತಿದ್ದರೂ ಜೇಬಿಗೆ ತುರುಕುತ್ತಿದ್ದಳು. ಪರೀಕ್ಷೆಗೆ ಕಟ್ಟಲು ಹಣಕ್ಕಾಗಿ ಪರದಾಡುತ್ತಿದ್ದಾಗ ಯಾರಿಂದಲೋ ತಿಳಿದುಕೊಂಡ ಆಕೆ ಇವನೊಡನೆ ಒಂದು ಮಾತನ್ನೂ ಕೇಳದೆ ತಾನೇ ಶಾಲೆಯ ಆಫೀಸಿನಲ್ಲಿ ಕಟ್ಟಿ ಬಂದವಳು ಇವನ ಕೈಗೆ ರಸೀದಿಯನ್ನು ತುರುಕಿ ಇವನು ಥ್ಯಾಂಕ್ಸ್ ಹೇಳುವುದನ್ನು ಕೇಳಿಸಿಕೊಳ್ಳದೆ ಕಣ್ಣೊರಸಿಕೊಳ್ಳುತ್ತ ಹೋಗಿದ್ದಳು. ಆ ರಾತ್ರಿಯಿಡೀ ಇವ ಮಲಗಿರಲಿಲ್ಲ. ತನ್ನ ಅಸಹಾಯಕತೆಯನ್ನು ನೆನೆಸಿಕೊಳ್ಳುತ್ತ ಅಳುತ್ತಲೇ ಕಳೆದಿದ್ದ. ಪರೀಕ್ಷೆ ಮುಗಿದದ್ದೇ ಯಾವ ಟ್ರೈನು ತಮ್ಮ ಊರಿಗೆ ಬರುತ್ತದೆಂದು ಕಾತರದಿಂದ ಕಾಯುತ್ತಿದ್ದನೋ, ಮುಂದೆ ಅದು ಪ್ರಾರಂಭವಾದ ಮೇಲೆ ದಿನ ಬೆಳಿಗ್ಗೆ ಅದು ಬರುವಾಗ ಮತ್ತು ಹೋಗುವಾಗ ಸಂಭ್ರಮದಿಂದ ಸ್ಟೇಷನ್ನಿಗೆ ಹೋಗಿ ನಿಲ್ಲುತ್ತಿದ್ದನೋ ಅದೇ ಟ್ರೈನು ಹತ್ತಿ ಊರು ಬಿಟ್ಟಿದ್ದ.

ಟಿಕೆಟ್ ಇಲ್ಲದ ಪ್ರಯಾಣ ಚೆಕ್ಕಿಂಗ್‌ನವರು ಹಿಡಿಯುವವರೆಗೆ ಅಷ್ಟೆ. ಅವರಿಂದ ಒದೆ ತಿಂದೋ, ಬೈಗಳು ತಿಂದೋ ಮುಂದಿನ ಊರಿನಲ್ಲಿ ಇಳಿಯುವುದು. ಅಲ್ಲಿಂದ ಕಾದು ಇನ್ನೊಂದು ಟ್ರೈನ್ ಹಿಡಿಯುವುದು. ಅನುಕೂಲವೆನಿಸಿದರೆ ಅದೇ ಊರಿನಲ್ಲಿ ನಾಲ್ಕೈದು ದಿನ ಕಳೆಯುವುದು. ಕೂಲಿ ನಾಲಿ ಮಾಡುವುದು. ಹೊಟ್ಟೆ ತುಂಬಿಸಿಕೊಳ್ಳಬೇಕಲ್ಲ. ರಾತ್ರಿ ಅದೇ ಸ್ಟೇಷನ್ನಿನ ಪ್ಲಾಟ್‌ಫಾರ್ಮ್ ಮೇಲೆ ಕಳೆಯುವುದು. ಕೆಲಸ ಮಾಡಿ ಬದುಕುತ್ತೇನೆಂದರೂ ಚಿಕ್ಕ ಚಿಕ್ಕ ಊರಿನಲ್ಲಿ ಕಷ್ಟವೇ. ಆಗಲೇ ಅಲ್ಲಿ ಬಂದು ಸೇರಿಕೊಂಡವರ ಹೊಟ್ಟೆ ತುಂಬಿಸಲೇ ಕಷ್ಟ ಪಡುವ ಊರು ಹೊಸಬರನ್ನು ಅಷ್ಟು